ಮಹತ್ತೋಭಾರ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ

ಸುಪ್ರಭಾತಂ

ಸುಬ್ರಹ್ಮಣ್ಯ (ದ. ಕ.)

ಷಡಾನನಂ ಕುಂಕುಮ ರಕ್ತವರ್ಣಂ ।
ಮಹಾಮತಿಂ ದಿವ್ಯ ಮಯೂರವಾಹನಂ ॥
ರುದ್ರಸ್ಯ ಸೂನುಂ ಸುರಸೈನ್ಯನಾಥಂ ।
ಗುಹಂ ಸದಾಶರಣಮಹಂ ಪ್ರಪದ್ಯೇ ॥

ರಚಿಸಿದವರು

ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾ

ಬೆಂಗಳೂರು

ಆಡಳಿತ ಮಂಡಳಿ

ಶ್ರೀ ಆನಂದ ಮೂಲ್ಯ
(ಸಹಾಯಕ ಆಯುಕ್ತರು, ಪುತ್ತೂರು.)
ಆಡಳಿತಾಧಿಕಾರಿ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ.

ಶ್ರೀ ಬಿ. ಲಕ್ಷ್ಮಣ ರಾವ್,
ಮೆನೇಜರ್, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಮಹತೋಭಾರ

ಕುಕ್ಕೆ ಶ್ರೀ ಸುಬ್ರಹ್ಮಣ್ಯ
ಸುಪ್ರಭಾತಂ



ರಚಿಸಿದವರು :

ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾ

ಬೆಂಗಳೂರು

ಪ್ರಕಾಶಕರು:

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮಂಡಳಿ

ತೃತೀಯ ಮುದ್ರಣ

೧೯೯೪

(ಈ ಗ್ರಂಥದ ಸಂಪೂರ್ಣ ಹಕ್ಕು ದೇವಳದ ಆಡಳಿತ ಮಂಡಳಿಗೆ ಸೇರಿದೆ)

ಕ್ರಯ : ರೂ. [illegible]



ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವರು

ಮುನ್ನುಡಿ

(ವಿದ್ಯಾ ವಿಭೂಷಣ, ವಿದ್ಯಾಸಾಗರ ಪ್ರೊಫೆಸರ್ ಎ. ಪಿ. ಎಲ್. ಶಾಸ್ತ್ರಿ, ಎಂ. ಎ.,
ಸುಪ್ರಭಾತ ಆಯ್ಕೆ ಸಮಿತಿ ಅಧ್ಯಕ್ಷರು)

ಭರತಖಂಡವು ನಿಜವಾಗಿಯೂ ಪುಣ್ಯಭೂಮಿ. ವಿಷ್ಣು ಪುರಾಣದಲ್ಲಿ ಅಂದಂತೆ "ಧನ್ಯಾಸ್ತು ಯೇ ಭಾರತ ಭೂಮಿ ಭಾಗೇ" ಇಲ್ಲಿಯ ಜನ ಧನ್ಯರು, ಇಲ್ಲಿಯ ಪ್ರಕೃತಿ ಅನಾದೃಶವಾದುದು. ಎಂತಹ ಗಿರಿರಾಜಿ; ಎಂತಹ ವೃಕ್ಷ ಸಂಪತ್ತು. ಈ ಅಪೂರ್ವ ವೈಭವದಿಂದ ಕೂಡಿದ ಭಾರತ, ಸಾವಿರಾರು ಋಷಿಗಳ ಅವಿಚ್ಛಿನ್ನ ತಪಸ್ಸಿನಿಂದ ತೇಜಃ ಪುಂಜವಾಗಿದೆ. ಇಂತಹ ರಮಣೀಯವೂ ಪವಿತ್ರವೂ ಆದ ಭಾರತದ ಅನೇಕ ಪ್ರದೇಶಗಳಲ್ಲಿ ಭಗವಂತ, ತನ್ನ ದಿವ್ಯ ಸಾನ್ನಿಧ್ಯವನ್ನು ಅಭಿವ್ಯಕ್ತ ಮಾಡಿದ್ದಾನೆ. ಈ ಭಗವತ್ಸಾನ್ನಿಧ್ಯವನ್ನು ಪಡೆದಿರುವ ತೀರ್ಥ ಕ್ಷೇತ್ರಗಳಿಗೆ ನಮ್ಮ ಜನ ಸಾವಿರಾರು ವರ್ಷಗಳಿಂದ, ಲಕ್ಷಾಂತರ ಸಂಖ್ಯೆಯಲ್ಲಿ ಬಂದು ಮಾನಸ್ಸಿಗೆ ಉಲ್ಲಾಸವನ್ನು ತಂದುಕೊಂಡಿದ್ದಾರೆ; ಹೃದಯವನ್ನು ನಿರ್ಮಲ ಮಾಡಿಕೊಂಡಿದ್ದಾರೆ ಭಗವಂತನಲ್ಲಿ ಭಕ್ತಿಯನ್ನು ಬೆಳೆಸಿಕೊಂಡು ಇಷ್ಟಾರ್ಥಗಳನ್ನು ಪಡೆದಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ತನ್ನ ಧರ್ಮ ಶ್ರದ್ಧೆಯನ್ನು ಪೋಷಿಸಿ ಜೀವನದಲ್ಲಿ ಭರವಸೆಯನ್ನು ಪಡೆದು ಋಜು ಮಾರ್ಗಾವಲಂಬಿಗಳಾಗಲು ಪ್ರಯತ್ನಿಸಿದ್ದಾರೆ. ಇಂತಹ ಪವಿತ್ರ ಕ್ಷೇತ್ರಗಳಲ್ಲಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ಪ್ರಮುಖವಾದ ಕ್ಷೇತ್ರ. ದೊಡ್ಡ ಇತಿಹಾಸವನ್ನು ಪಡೆದಿರುವ ಈ ಕ್ಷೇತ್ರಕ್ಕೆ ಶ್ರೀ ಸ್ಕಂದಸ್ವಾಮಿಯ ಅನುಗ್ರಹಕ್ಕಾಗಿ ಇಂದಿಗೂ ಸಾವಿರಾರು ಜನ ಬರುತ್ತಾರೆ. ಇಂತಹ ಭಕ್ತರ ಮನೋಲ್ಲಾಸಕ್ಕಾಗಿ, ದೇವಾಲಯದ ಅಭಿವೃದ್ಧಿಗಾಗಿ, ಆಡಳಿತ ಸಮಿತಿ, ಅದರಲ್ಲೂ ಸಮಿತಿಯ ಅಧ್ಯಕ್ಷರಾದ ವಿಧಾನಸಭಾ ಸದಸ್ಯ ಶ್ರೀ ಕೆ. ಸುಬ್ರಹ್ಮಣ್ಯ ಗೌಡರವರು ಶ್ರಮಿಸುತ್ತಿರುವುದು ವಿಶೇಷ ಸಂತೋಷದಾಯಕ ಸಂಗತಿ.

ಭಗವದ್ಭಕ್ತರಾದ ಮಾನ್ಯ ಶ್ರೀ ಕೆ. ಸುಬ್ರಹ್ಮಣ್ಯ ಗೌಡರೂ ಶ್ರೀ ಶ್ರೀಕಂಠೇಶ್ವರ ಸುಪ್ರಭಾತ ವ್ಯವಸ್ಥಾಪಕರಾದ ಶ್ರೀಮಾನ್ ಬಿ.ಎಸ್ ಸುಬ್ಬರಾಯರೂ, ಇಂತಹ ಪವಿತ್ರ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ಸ್ಕಂದ ಸ್ವಾಮಿಗೆ ಸುಪ್ರಭಾತ ಸೇವೆಯನ್ನು ಕಲ್ಪಿಸಬೇಕೆಂಬ ಆಶಯದಿಂದ ರಾಜ್ಯದ ವಿದ್ವಾಂಸರುಗಳಿಂದ ಸುಪ್ರಭಾತ ಪದ್ಯಗಳನ್ನು ಬರಮಾಡಿ

ಕೊಂಡು, ಅವನ್ನು ಪರಿಶೀಲಿಸತಕ್ಕ ಭಾಗ್ಯವನ್ನು ನನಗೂ, ನನ್ನ ಮಿತ್ರರೂ ಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ ಆದ ಪ್ರೊ॥ ಕೆ.ಟಿ. ಪಾಂಡುರಂಗಿ ಮತ್ತು ಡಾ॥ ಟಿ.ಎಸ್. ಕೃಷ್ಣಮೂರ್ತಿ ಅವರಿಗೂ ವಹಿಸಿಕೊಟ್ಟರು. ಈ ಸದಾವಕಾಶವನ್ನು ಕಲ್ಪಿಸಿಕೊಟ್ಟ ಉಪಕಾರಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ.

ಸ್ಪರ್ಧೆಗಾಗಿ ಬಂದ ಹತ್ತೊಂಬತ್ತು ಕವನಗಳನ್ನು ಓದುವುದು ನಮಗೊಂದು ಸಂತೋಷ ಕಾರ್ಯವಾಯಿತು. ಅವುಗಳಲ್ಲಿ ಕೆಲವಂತೂ ಸಂಸ್ಕೃತ ಭಾಷೆ ಅತ್ಯಂತ ರಮಣೀಯವಾದ ಅಷ್ಟೇ ಅಲ್ಲ,ಜೀವಂತ ಭಾಷೆ, ದೈವ ಭಾಷೆ ಎಂದು ತಿಳಿಸಲು ಸಾಕ್ಷಿಭೂತವಾಗಿ ನಿಲ್ಲ ಬಲ್ಲ ಕವನಗಳು. ಇವುಗಳಲ್ಲಿ, ಇದು ಮೊದಲು, ಇದು ಎರಡನೆಯದು ಎಂದು ಹೇಳುವುದು ಕಷ್ಟ ಸಾಧ್ಯವಾದ ಕೆಲಸ. ಒಂದೊಂದೂ ಒಂದೊಂದು ದೃಷ್ಟಿಯಿಂದ ಚೆಲುವಾಗಿದೆ, ಶ್ರಾವ್ಯವಾಗಿದೆ, ರಸಮಯವಾಗಿದೆ. ಇಂತಹ ಕವನಗಳನ್ನು ಸಂಸ್ಕೃತದಲ್ಲಿ ರಚಿಸಬಲ್ಲ ಕಾವ್ಯಶ್ರೀ ಪುತ್ರರು ಇಂದೂ ನಮ್ಮ ನಡುವೆ ಇದ್ದಾರೆ ಎಂಬುದು ಹೆಮ್ಮೆಯ ವಿಷಯ.

ಶ್ರೀ ಸುಬ್ರಹ್ಮಣ್ಯ ಸುಪ್ರಭಾತಕ್ಕೆ ಆಯ್ಕೆಯಾಗಿರುವ ಕವನದ ಕರ್ತೃ ವಿದ್ವಾನ್ ಶ್ರೀ ಎನ್. ರಂಗನಾಥಶರ್ಮರವರು ಕರ್ನಾಟಕದ ಹಿರಿಯ ಸಂಸ್ಕೃತ ವಿದ್ವಾಂಸರಲ್ಲಿ ಒಬ್ಬರು. ಅವರು ವಿಶಿಷ್ಟವಾದ ಶಾಸ್ತ್ರ ಪ್ರೌಢಿಮೆಯ ಜೊತೆಗೆ ಕಾವ್ಯ ರಚನಾ ಪ್ರತಿಭೆಯನ್ನೂ ಪಡೆದಿದ್ದಾರೆ. ಅವರದು ಐವತ್ತು ವರುಷಗಳ ಅಧ್ಯಯನ ಅಧ್ಯಾಪನ ತಪಸ್ಸು; ಸುಸಂಸ್ಕೃತ ಜೀವನ. ಇಂತಹ ವಿದ್ವಾಂಸರೂ ಕವಿಗಳೂ ರಚಿಸಿರುವ ಈ ಕವನ, ಭಗವತ್ಪ್ರೀತಿಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ.

ಆರಿಸಲಾದ ಸುಪ್ರಭಾತ ಕವನ ಭಗವಂತನ ಸೇವೆಗೆ ಅರ್ಹವಾಗಿ, ಸಾವಿರಾರು ಜನ ಭಕ್ತರ ಮನಸ್ಸಿಗೆ ಸಂತೋಷವನ್ನುಂಟು ಮಾಡುವುದಾಗಿ, ಈ ಕಾರ್ಯವನ್ನು ನೆರವೇರಿಸಲು ನಡುಕಟ್ಟಿ ನಿಂತಿರುವ ಆಡಳಿತ ಮಂಡಳಿಯ ಸದಸ್ಯರಿಗೆ ಕೃತಾರ್ಥತೆಯನ್ನು ತರುವಂತಹುದಾಗಿ, ಶ್ರೀ ಸ್ಕಂದಸ್ವಾಮಿಯು ಅನುಗ್ರಹಿಸಲೆಂದು ಅನನ್ಯ ಭಕ್ತಿಯಿಂದ ಬೇಡುತ್ತೇನೆ.

ಎಂ. ಪಿ. ಎಲ್. ಶಾಸ್ತ್ರಿ

ನಿವೇದನೆ

ಓ ಎನ್ನೊಡೆಯ ಸುಬ್ರಹ್ಮಣ್ಯ, ಪರಂಜ್ಯೋತಿಯಾದ ನಿಖಿಲ ಭುವನದ ಸ್ವಾಮಿಯೋ. ಭೂಮಾನೆನಿಸಿದ ನೀನು ತಾಪಸರಿಗೆ ಗಮ್ಯವಾದ ಧಾಮವಾಗಿರುವೆ. ಲೋಕಕಲ್ಯಾಣಕ್ಕಾಗಿ, ಕ್ಷೇತ್ರಜ್ಞನಾದ ನೀನು ಈ ಕ್ಷೇತ್ರದಲ್ಲಿ ನೆಲೆಸಿದೆ. ನಿನ್ನ ನಾಮಬಲದಿಂದ ಪ್ರಸಿದ್ಧಿ ಪಡೆದ ಈ ಸ್ಥಳ ಪವಿತ್ರ ಕ್ಷೇತ್ರವಾಯಿತು. ಸಜ್ಜನರ ಯಾತ್ರಾ ಸ್ಥಳವಾಯಿತು, ಆನೆ ಹೋದುದೇ ದಾರಿ. ನೀನು ನೆಲೆಸಿದ್ದೆ ಪುಣ್ಯಧಾಮ. ಹೇ ಕುಮಾರ, ನಿನ್ನ ಪಾದತಲಸ್ಪರ್ಶದ ಮಹಿಮೆಯಿಂದ ಈ ಜಲಧಾರೆ ಕುಮಾರಧಾರೆ ಯೆನಿಸಿ ಮಿಂದವರ ಮಾಲಿನ್ಯವನ್ನು ನೀಗಿಸುವ ತೀರ್ಥವಾಯಿತು.

ಹೇ ದೇವ, ಅಚ್ಚರಿ ಕಣಾ ನಿನ್ನ ನಡೆ. ಗರುಢನ ಭಯದಿಂದ ನಡು ಗುತ್ತಿದ್ದ ಭಕ್ತನಾದ ವಾಸುಕಿಯನ್ನು ಪೊರೆಯಲು ವಾಸುಕಿಯಾದೆ ಅಥವಾ ವಾಸುಕಿಯೇ ನೀನಾದೆಯಾ! ದಿವ್ಯ ಮಂಗಳ ರೂಪದಿಂದ ಮಾರ ನನ್ನು ಕುತ್ಸೆ ಗೈದು ಅವನನ್ನು ಕುಮಾರನನ್ನಾಗಿಸಿ ನೀನೇ ಕುಮಾರನೆಂದು ಪ್ರಸಿದ್ಧಿ ಪಡೆದೆ. ಲೋಕಕಂಟಕನಾದ ತಾರಕನನ್ನು ಸಂಹರಿಸಿ ನೀನೇ ಭಕ್ತ ಲೋಕದ ತಾರಕನಾದೆ. ದೇವಸೇನಾಪತಿಯಾದರೂ ನಿತ್ಯ ಬ್ರಹ್ಮಚಾರಿ ಯೆನಿಸಿದೆ. ಅಮೋಘಮಹಿಮನ್ನೆ ನೀನು. ತಾಯಿ ಗಿರಿಜೆ, ತಂದೆ ಗಿರೀಶ. ತಾಯಿತಂದೆಗಳಿಗೆ ಗಿರಿಯು ಪ್ರಿಯವೆಂದು ನೀನೂ ಗಿರಿಗಳ ನಡುವೆ ನೆಲೆ ಸಿದೆ. ನಿನ್ನ ಪ್ರಿಯವಾಹನವಾದ ನವಿಲು ನಲಿಯಲೆಂದು ಕಾಡುಗಳ ನಡುವೆ ಬಿಡಾರ ಹೂಡಿವೆ. ಓ ಸ್ವಾಮಿ ಅಮೂರ್ತನಾದರೂ ಭಕ್ತರಿಗೆ ಪ್ರಿಯವಾಗಲೆಂದು ಮೂರ್ತನಾಗಿ ದಿವ್ಯ ಮಂಗಳ ಮೂರ್ತಿಯನ್ನು ಧರಿಸಿ ಈ ಕ್ಷೇತ್ರದಲ್ಲಿ ನೆಲೆಸಿದೆ.

ನಿನ್ನಾಜ್ಞೆಯನ್ನು ಮನ್ನಿಸಿ ಸೂರ್ಯ ಚಂದ್ರರುದಿಸುವರು. ಚಂದ್ರನು ನಿನ್ನ ಕ್ರೀಡೋದ್ಯಾನದ ಓಷಧಿ ವೃಕ್ಷಗಳಿಗೆ ಅಮೃತಧಾರೆಯನ್ನೆರೆದು ನಿನ್ನನ್ನರ್ಚಿಸುವ ಹೂಗಳೇ ನಕ್ಷತ್ರಪುಂಜಗಳೆಂದು ನನ್ನೆಣಿಕೆ ಅವನ ಪಾಳಿಯು ಮುಗಿದೊಡನೆ ಸೂರ್ಯನುದಿಸಿ ಆ ಹೂವಿನ ನಿರ್ಮಾಲ್ಯವನ್ನು ತನ್ನ ಕರಗಳಿಂದ ಬಳಿದು ತೆಗೆದು ನಿನ್ನ ಸೇವೆಗೆ ಸಜ್ಜಾಗುವನು. ನಾರದಾದಿ

ಮುನಿಗಳು ನಿನ್ನ ಕೀರ್ತಿಯನ್ನು ಹಾಡಿ ಹೊಗಳುವರು. ಬ್ರಹ್ಮವೆಂದು ಪರ್ಯಾಯನಾಮದಿಂದ ಪ್ರಸಿದ್ಧಿ ಪಡೆದ ವೇದವಲ್ಲಿ ಪ್ರತಿಷ್ಠಿತನಾದ ನೀನೇ ಸುಬ್ರಹ್ಮಣ್ಯನೆಂದು ವೇದಗಳು ಸಾರುವುವು.

ಎಲೆ ದೇವ, ನಿನ್ನ ದಿವ್ಯಧಾಮದಿಂದ ಅವತರಿಸಿ-ಕೆಳಗಿಳಿದು ದಿವ್ಯ ಲೀಲೆಯನ್ನು ಪ್ರದರ್ಶಿಸಿ ಭಕ್ತರ ಕಣ್ಣಿಗೆ ಹಬ್ಬವಾದೆ. ನಿನ್ನ ಚರಿತೆಯನ್ನು ಬಣ್ಣಿಸಿ ಬಣ್ಣಿಸಿ ರಸಮಯವಾದ ಕಾವ್ಯಗಳನ್ನು ರಚಿಸಲು ಕಾಳಿದಾಸಾದಿ ಕವೀಂದ್ರರಿಗೆ ಸ್ಫೂರ್ತಿಯನ್ನು ನೀಡಿದೆ. ಜೀವರಿಗೆ ಈ ದೇಹವನ್ನು-ಈ ಮನಸ್ಸನ್ನು ನೀನು ನೀಡಿದ್ದೇ ಇವರ ವಿವಿಧ ಕಷ್ಟಗಳಿಗೆ ನಿಮಿತ್ತವಾಯಿ ತೆಂದು ನಾನು ಎಣಿಸಿದ್ದೆ, ಓ ಸ್ವಾಮಿ, ನನ್ನ ಎಣಿಕೆ ಹುಸಿ, ನಿನ್ನ ದಿವ್ಯ ಸುಂದರ ರೂಪವನ್ನೂ ಕಣ್ತುಂಬ ನೋಡಿ ,ನಿನ್ನ ಚರಿತ್ರಾಮೃತದ ಭವ್ಯ ಕಾವ್ಯಗಳನ್ನು ಮತ್ತೆ ಮತ್ತೆ ಕೇಳಿ ಪರಮಾನಂದದಲ್ಲಿ ಭಕ್ತರು ಓಲಾಡ ಲೆಂದು ಈ ದೇಹವನ್ನು ಜೀವರಿಗೆ ಕೊಟ್ಟಿರುವೆ. ಇದು ಭಕ್ತರ ಭಾಗ್ಯ. ನಿನ್ನ ಅನುಗ್ರಹ.

ಓ ಸುಬ್ರಹ್ಮಣ್ಯ, ಭಕ್ತರ ಅಂತರಂಗವೆ ನೀನು, ಅಂತರಂಗದ ನಾಥನೂ ನೀನು. ಭಕ್ತರ ಅಂತದಲ್ಲಿ-ಕಡೆಯಲ್ಲಿ ನಿಲ್ಲುವ ಅರ್ಹತೆಯನ್ನು ಎನಗೆ ಕರುಣಿಸು. ನಿನ್ನ ನಾಟ್ಯಕ್ಕೆ ಎನ್ನ ಅಂತರಂಗವು ರಂಗಸ್ಥಳವಾಗಲಿ ಇದೇ ಎನ್ನ ಅಂತರಂಗದ ಬೇಡಿಕೆ.

ಪಲಬರ್ ದೇವರ್ ಲೋಕದಿ
　　ನೆಲೆಸಿರ್ಪರ್ ಗಡ ವಿಶೇಷಕಥನದೊಳಿನ್ನೇಂ ।
ನೆಲೆ ಪಲವಿಗೆ ಮತಿಭೇದಮೆ
　　ವಲಮೊಲವಿನ ದೈವಮೆನಗೆ ಸುಬ್ರಹ್ಮಣ್ಯಂ ॥

ಎನ್. ರಂಗನಾಥಶರ್ಮಾ

ಪ್ರಕಾಶಕನ ವಿಜ್ಞಾಪನೆ

ಶ್ರೀ ದಕ್ಷಿಣ ಕಾಶಿಯೆಂದು ಸುಪ್ರಸಿದ್ಧವಾದ ಗರಳಪುರಿ ಕ್ಷೇತ್ರದಲ್ಲಿ (ನಂಜನಗೂಡು) ಶ್ರೀ ಪಾರ್ವತೀ ಶ್ರೀ ಕಂಠೇಶ್ವರ ಸುಪ್ರಭಾತ ಸೇವೆ ಯನ್ನೇರ್ಪಡಿಸುವ ಸೌಭಾಗ್ಯವು ನನಗೆ ಲಭಿಸಿತು. ಏಳೆಂಟು ವರ್ಷಗಳಿಂದ ಪ್ರತಿ ಪ್ರಾತಃಕಾಲವೂ ಈ ದೇವಾಲಯದಲ್ಲಿ ನಾಲ್ಕು ಜನ ವಿದ್ವಾಂಸರು ಸುಪ್ರಭಾತವನ್ನು ದೇವರ ಸಮ್ಮುಖದಲ್ಲಿ ಹಾಡುವಂತೆ ಕರ್ನಾಟಕ ಸರ್ಕಾರದವರು ಏರ್ಪಡಿಸಿರುವರು.

ಅದೇ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸ್ಕಂದಸ್ವಾಮಿಯ ಪವಿತ್ರ ಕ್ಷೇತ್ರದಲ್ಲಿಯೂ ಸಹ ಕುಕ್ಕೆ "ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಸುಪ್ರಭಾತ" ವನ್ನೇರ್ಪಡಿಸಲು ಅಲ್ಲಿನ ದೇವಾಲಯದ ಆಡಳಿತ ಮಂಡಳಿ ಯವರು ನಿರ್ಧರಿಸಿ ನನ್ನನ್ನು ಈ ಮಹತ್ಕಾರ್ಯಕ್ಕಾಗಿ ಗೌರವ ಕಾರ್ಯ ದರ್ಶಿಯನ್ನಾರಿಸಿ, ಗೌರವಿಸಿರುವುದು ನನಗೆ ದೊರೆತ ಮಹಾ ಭಾಗ್ಯ. ನಂಜನಗೂಡಿನಲ್ಲಿ ನಾನು ಮಾಡಿದ ಭಗವತ್ಸೇವೆಯ ಫಲ. ಇದಕ್ಕಾಗಿ ನಾನು ಆಡಳಿತ ಮಂಡಳಿಯವರಿಗೂ ಹಾಗೂ ಅಧ್ಯಕ್ಷರಾದ ಶ್ರೀಮಾನ್ ಕೆ. ಸುಬ್ರಹ್ಮಣ್ಯ ಗೌಡ, ಎಂ.ಎಲ್.ಎ. ಅವರಿಗೂ ಕೃತಜ್ಞನಾಗಿರುತ್ತೇನೆ.

ಸಮಿತಿಯ ಪ್ರಾರ್ಥನೆಯಂತೆ ಕರ್ನಾಟಕದ ಹತ್ತೊಂಬತ್ತು ಜನ ವಿದ್ವಾಂಸರುಗಳು ತಮ್ಮ "ಸುಪ್ರಭಾತ" ಕವನಗಳನ್ನು ರಚಿಸಿ ಕಳುಹಿಸಿ ದ್ದರು. ಈ ಕಾವ್ಯಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಬೆಂಗಳೂರು ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲಾ ಪ್ರೊ। ಶ್ರೀಮಾನ್ ಎನ್. ರಂಗನಾಥಶರ್ಮರವರ ಕವನವೇ ಅತ್ಯುತ್ತಮವಾದುದೆಂದು ಸದರಿ ಶ್ಲೋಕಗಳು ದೇವಾಲಯದಲ್ಲಿ ಶ್ರೀ ಸ್ಕಂದಸ್ವಾಮಿಗೆ ಪ್ರತಿದಿನ ಉಷಃ ಕಾಲದಲ್ಲಿ ಇಂಪಾಗಿ ಹಾಡಲು ಅರ್ಹವಾದುದೆಂದೂ ಆರಿಸಿ ಉಪಕಾರ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷ ಬೆಂಗಳೂರಿನ ಎಂ. ಇ. ಎಸ್. ಕಾಲೇಜಿನ ಪ್ರಿನ್ಸಿಪಾಲರಾದ ವಿದ್ಯಾ ವಿಭೂಷಣ, ವಿದ್ಯಾಸಾಗರ ಪ್ರೊಫೆಸರ್ ಶ್ರೀಮಾನ್ ಎಂ.ಪಿ.ಎಲ್. ಶಾಸ್ತ್ರಿಗಳವರಿಗೂ, ಮಾನ್ಯ ಸದಸ್ಯರುಗಳಾದ ಡಾಕ್ಟರ್ ಟಿ.ಎಸ್. ಕೃಷ್ಣಮೂರ್ತಿಯವರಿಗೂ,

ಪ್ರೊಫೆಸರ್ ಶ್ರೀಮಾನ್ ಕೆ. ಟಿ. ಪಾಂಡುರಂಗಿಯವರಿಗೂ ಸುಪ್ರಭಾತ ಸಮಿತಿಯ ಪರವಾಗಿ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

ಸುಪ್ರಭಾತವನ್ನು ಸುಪ್ರಸಿದ್ಧ ಸಂಗೀತ ವಿದುಷಿಯೊಬ್ಬರಿಂದ ಹಾಡಿಸಿ ಮುದ್ರಣ ಮಾಡಿಸಿ ನಂತರ ಪ್ರಾರಂಭೋತ್ಸವವನ್ನೇರ್ಪಡಿಸುವ ಭಾರವು ಅಧ್ಯಕ್ಷರ ಮತ್ತು ನನ್ನ ಮೇಲಿದೆ. ಈ ಕಾರ್ಯಗಳೆಲ್ಲ ಸಂಪೂರ್ಣವಾದ ಮೇಲೆ ದೇವಾಲಯದ ಆಡಳಿತ ಮಂಡಳಿಯವರಿಗೆ ಈ ಮಹಾತ್ಕಾರ್ಯಕ್ಕೆ ಸಂಬಂಧಪಟ್ಟ ಸಮಸ್ತ ವಹಿವಾಟುಗಳನ್ನೆಲ್ಲಾ ಸಮರ್ಪಿಸಲು ಆದಷ್ಟು ಬೇಗನೆ ಸಾಧ್ಯವಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಸಕಾಲದಲ್ಲಿ ಸುಂದರವಾಗಿ ಸುಪ್ರಭಾತ ಪುಸ್ತಕಗಳನ್ನು ಮುದ್ರಿಸಿ ಕೊಟ್ಟ ಬೆಂಗಳೂರಿನ ಅನಂತ ಪ್ರಿಂಟರ್ಸ್ ಮಾಲೀಕರಾದ ಶ್ರೀ ಹೆಚ್. ಅನಂತ ಶಾಸ್ತ್ರಿಯವರಿಗೆ ಧನ್ಯವಾದಗಳು.

ಜಗದ್ರಕ್ಷನಾದ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯು ತನ್ನ ಭಕ್ತಕೋಟಿಗಳನ್ನೆಲ್ಲಾ ಅನುಗ್ರಹಿಸಿ ಅವರ ಆಕಾಂಕ್ಷೆಗಳನ್ನೀಡೇರಿಸಲೆಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಗಾಂಧಿನಗರ ಬೆಂಗಳೂರು–9 ಬಿ. ಎಸ್. ಸುಬ್ಬರಾವ್
ತಾ. 20–12–1974 ಗೌರವ ಕಾರ್ಯದರ್ಶಿ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಪರಿಚಯ

ಈ ಕ್ಷೇತ್ರವು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಸುಳ್ಯ ತಾಲೂಕಿನ ಪೂರ್ವಭಾಗದಲ್ಲಿದೆ. ಈ ದೇವಸ್ಥಾನವಿರುವ ಗ್ರಾಮಕ್ಕೆ ಸುಬ್ರಹ್ಮಣ್ಯವೆಂದು ಹೆಸರು ಇದು ಕಾದಿಟ್ಟ ಕಾಡುಗಳುಳ್ಳ ಹಳ್ಳಿಪ್ರದೇಶ ವಾಗಿದ್ದರೂ ಅರಣ್ಯ ನದೀಪರ್ವತಾದಿಗಳ ಸೃಷ್ಟಿಸೌಂದರ್ಯದ ನೆಲೆಬೀ ಡಾಗಿದೆ. ಈ ಗ್ರಾಮದಿಂದ ಮೂರು ಮೈಲು ದೂರದಲ್ಲಿ ಕರ್ನಾಟಕ ಸೀಮೆಯ ಗಡಿ ಇದೆ. ಇಲ್ಲಿಂದ ಸುಮಾರು 32 ಮೈಲು ಪಶ್ಚಿಮದಲ್ಲಿ ಪುತ್ತೂರು, ಉಪ್ಪಿನಂಗಡಿ ಎಂಬ ಪಟ್ಟಣಗಳಿವೆ. 50ಮೈಲು ಪೂರ್ವೋ ತ್ತರದಲ್ಲಿ ಸಕಲೇಶಪುರವಿದೆ. ಹಾಸನ ಸಕಲೇಶಪುರ ಮಾರ್ಗವಾಗಿ ಉಪ್ಪಿನಂಗಡಿಗೆ ಬಂದು ಕಡಬ ರಸ್ತೆಯ ಮೂಲಕವಾಗಿ ಮಳೆಗಾಲದ ಲ್ಲಿಯೂ ವಾಹನ ಮೂಲಕ ಶ್ರೀ ಸ್ಥಳಕ್ಕೆ ಯಾತ್ರಿಕರು ನಿರಾತಂಕವಾಗಿಬರ ಬಹುದಾದ ರಸ್ತೆಯ ಅನುಕೂಲತೆ ಈಗ ಏರ್ಪಟ್ಟಿದೆ. ಈ ಸ್ಥಳಕ್ಕೆ ಬರಲು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಂಗಳೂರು, ಮೈಸೂರು ಸೀಮೆಯಲ್ಲಿ ಹಾಸ ನವೂ ಇವೆರಡು ಅತ್ಯಂತ ಸಮೀಪದ ರೈಲ್ವೇ ಸ್ಟೇಶನ್ನುಗಳಾಗಿವೆ. ಮಂಗ ಳೂರು ರೈಲ್ವೇ ಸ್ಟೇಶನ್ನು ಸುಬ್ರಹ್ಮಣ್ಯದಿಂದ 67 ಮೈಲು ಪಶ್ಚಿಮದ ಲ್ಲಿದೆ. ಇಲ್ಲಿಂದ ಬಸ್ಸುಗಳು ಪ್ರತಿನಿತ್ಯವೂ ಮಧ್ಯಾಹ್ನ ಮತ್ತು ಸಾಯಂ ಕಾಲ ಎರಡು ವೇಳೆಗಳಲ್ಲಿಯೂ ಮೇಲೆ ಕಾಣಿಸಿದ ಮಾರ್ಗವಾಗಿ ಸುಬ್ರ ಹ್ಮಣ್ಯಕ್ಕೆ ಬರುವಂತೆ ಆಗಿದೆ ಅಲ್ಲದೆ ಮಂಗಳೂರಿನಿಂದ ಪುತ್ತೂರಿಗೆ ಬಂದು ದರ್ಭೆ ಸುಬ್ರಹ್ಮಣ್ಯ ಮಾರ್ಗವಾಗಿಯೂ, ಬೆಳ್ಳಾರೆ ಮಾರ್ಗ ವಾಗಿಯೂ ಶ್ರೀ ಕ್ಷೇತ್ರಕ್ಕೆ ಬಸ್ಸು ಪ್ರಯಾಣದ ಅನುಕೂಲತೆ ಆಗಿರುತ್ತದೆ. ಮಂಗಳೂರಿನಿಂದ ಸುಬ್ರಹ್ಮಣ್ಯಕ್ಕೆ ಬಸ್ಸುಗಳಿಗೆ ಸಾಧಾರಣ ಐದು ಘಂಟೆಗಳ ಕಾಲ ಬೇಕಾಗುವುದು. ಮಡಿಕೇರಿಯಿಂದ ನೇರವಾಗಿ ಸುಬ್ರಹ್ಮಣ್ಯಕೆ ಕೇವಲ 33 ಮೈಲು ಹಾದಿಯ ರಸ್ತೆಯ ನಿರ್ಮಾಣದಿಂದ ಮೈಸೂರ ಕಡೆಯಿಂದ ಕ್ಷೇತ್ರಕ್ಕೆ ಬರುವ ಯಾತ್ರಿಕರಿಗೊಂದು ಶುಭೋದಯವಾ ಯಿತು.

ಹಾಸನ ಮಾರ್ಗವಾಗಿ ಬರತಕ್ಕವರಿಗೆ ಸಕಲೇಶಪುರ, ಬಿಸಲೆಮಾರ್ಗ ವಾಗಿ ಸುಬ್ರಹ್ಮಣ್ಯಕ್ಕೆ ಬರಬಹುದು. ಈ ಮಾರ್ಗವಾಗಿ 75 ಮೈಲುಗಳ

ದೂರ ಇದೆ. ಆದರೆ ಬೇಸಿಗೆಯಲ್ಲಿ ಹೊರತು ಮಿಕ್ಕ ಕಾಲಗಳಲ್ಲಿ ಈ ಮಾರ್ಗದಲ್ಲಿ ಬಸ್ಸು ಚಲಾವಣೆ ಇಲ್ಲದಿದ್ದರಿಂದ ಪ್ರಯಾಣಿಕರಿಗೆ ಈ ಮಾರ್ಗವು ವರ್ಷದ ಒಂದು ಭಾಗದಲ್ಲಿ ಮಾತ್ರ ಉಪಯುಕ್ತವಿರುತ್ತದೆ. ಆದುದರಿಂದ ಇತರ ಕಾಲಗಳಲ್ಲಿ ಹಾಸನ ಮಾರ್ಗವಾಗಿ ಬರತಕ್ಕವರು ಸಕಲೇಶಪುರ ಉಪ್ಪಿನಂಗಡಿಗಾಗಿ ಸುಬ್ರಹ್ಮಣ್ಯಕ್ಕೆ ಬರಬೇಕಾಗುತ್ತದೆ. ಬೆಳಗ್ಗೆ ಹಾಸನದಿಂದ ಹೊರಟಲ್ಲಿ ಅದೇ ದಿನ ಸಾಯಂಕಾಲ ಸುಬ್ರಹ್ಮಣ್ಯಕ್ಕೆ ತಲಪಬಹುದು. ಈ ಮಾರ್ಗದ ದೂರ ಸುಮಾರು ನೂರು ಮೈಲು ಇದೆ. ಬೆಂಗಳೂರು ಮಂಗಳೂರು ರೈಲು ಮಾರ್ಗದಲ್ಲಿರುವ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣವು 12 ಕಿಲೋ ಮೀಟರ್ ದೂರದಲ್ಲಿದೆ. ರೈಲು ನಿಲ್ದಾಣದಿಂದ ಕ್ಷೇತ್ರಕ್ಕೆ ವಾಹನ ಸೌಕರ್ಯವಿದೆ.

ಈ ಸುಬ್ರಹ್ಮಣ್ಯ . ಕ್ಷೇತ್ರವು ಪೂರ್ವದಲ್ಲಿ ಕುಕ್ಕೆ ಪಟ್ಟಣವೆಂದು ಪ್ರಸಿದ್ಧವಾಗಿತ್ತೆಂದು ಶಾಸನಗಳಿಂದಲೂ, ಗ್ರಂಥಗಳಿಂದಲೂ, ಜನರ ಹೇಳಿಕೆಯಿಂದಲೂ ತಿಳಿದು ಬರುತ್ತದೆ. ಶ್ರೀ ಮಚ್ಛಂಕರಭಗವತ್ಪಾದಾಚಾರ್ಯರು ದಿಗ್ವಿಜಯಕ್ಕಾಗಿ ಇಲ್ಲಿಗೆ ಬಂದು ಕೆಲವು ದಿನ ವಾಸಮಾಡಿದ್ದರೆಂದು ಆನಂದಗಿರಿ ವಿರಚಿತ ಶಂಕರ ವಿಜಯದಲ್ಲಿ ಹೇಳಿದೆ. ಶ್ರೀ ಶಂಕರಾಚಾರ್ಯ ವಿರಚಿತ ಸುಬ್ರಹ್ಮಣ್ಯ ಭುಜಂಗಪ್ರಯಾತಸ್ತೋತ್ರದಲ್ಲಿ "ಭಜೇ ಕುಕ್ಕೆ ಲಿಂಗಂ" ಎಂದು ಈ ಸ್ಥಳದ ಉಲ್ಲೇಖವಿದೆ. ದೇವಳದ ಉತ್ತರ ಭಾಗದಲ್ಲಿ ಶಂಕರ ಮಠವೂ ಅತಿ ಪ್ರಾಚೀನದ್ದಾಗಿದೆ. ಈ ಕ್ಷೇತ್ರದಲ್ಲಿ ಶ್ರೀ ಮದ್ಭಗವತ್ಪಾದಾಚಾರ್ಯರಾದ ಮಧ್ವಾಚಾರ್ಯರ ದ್ವೈತಸಂಪ್ರದಾಯದ ಮಠವಿದೆ. ಆ ಯತಿ ಪರಂಪರೆಯು ಇಂದಿಗೂ ನಡೆದು ಬರುತ್ತಿದೆ. ಇಲ್ಲಿಯ ಸ್ಥಳ ಪುರಾಣ ಪ್ರಕಾರ ಅನೇಕ ದೇವಋಷಿಗಳು ಅನೇಕ ಶಿವಲಿಂಗಗಳನ್ನು ಈ ಕ್ಷೇತ್ರದಲ್ಲಿ ಸ್ಥಾಪಿಸಿದ್ದಾಗಿ ತಿಳಿದು ಬರುತ್ತದೆ. ವಾಸುಕಿಯೂ ಒಂದು ಶಿವಲಿಂಗವನ್ನು ತಾನು ವಾಸಿಸುವ ಗುಹದ್ವಾರದಲ್ಲಿ ಸ್ಥಾಪಿಸಿ ಸ್ಕಂದಸ್ವಾಮಿಯ ಕಲಾಂಶವನ್ನು ಒಳಗೊಂಡು ನಿರಂತರ ಗುಹೆಯಲ್ಲಿ ವಾಸಿಸುತ್ತಿರುವನೆಂದೂ ಸ್ಥಳಪುರಾಣಗಳಲ್ಲಿ ಹೇಳಿರುವುದು. ಇಂತಹ ಪ್ರಸಿದ್ಧ ಶಿವಲಿಂಗವನ್ನು ಉಲ್ಲೇಖಿಸುವುದೇ ಕುಕ್ಕೆ ಲಿಂಗವೆಂಬ ಶಬ್ದದ ಅರ್ಥವಾಗಿರುವುದೆಂದು ತಿಳಿಯಬೇಕು. ಸಂಸ್ಕೃತದಲ್ಲಿ "ಕುಕ್ಷಿ" ಎಂದರೆ ಗುಹೆ ಎಂದ

ರ್ಥವೂ ಇದೆ. ಉದಾ:- "ತ್ರಾಸಾರ್ಥ ಮಸ್ಮಿನ್ನಹ ಮದ್ರಿಕುಕ್ಷೌ" (ರಘುವಂಶ ಸರ್ಗ-2-ಪದ್ಯ 38) ಕುಕ್ಷಿ ಎಂಬ ಶಬ್ದವು ತದ್ಭವವಾಗಿ ಕನ್ನಡದಲ್ಲಿ "ಕುಕ್ಕೆ" ಎಂದಾಗುವುದು. ಕುಕ್ಕೆಯಲ್ಲಿ ಸ್ಥಾಪಿಸಲ್ಪಟ್ಟ ಲಿಂಗ) (ವಾಸುಕಿಯು ಗುಹಾದ್ವಾರದಲ್ಲಿ ಸ್ಥಾಪಿಸಿದ ಲಿಂಗ)ದ ಪ್ರಸಿದ್ಧಿಯಿಂದ ಕುಕ್ಕೆಲಿಂಗವೆಂದು ಪ್ರಸಿದ್ಧಿಯಾಗಿ ಈ ಮೂಲಕ ಸ್ಥಳಕ್ಕೂ ಕುಕ್ಕೆಪುರ ವೆಂಬ ಪ್ರಸಿದ್ಧಿಯುಂಟಾಗಿರಬಹುದು 113 ದಿವ್ಯ ಶೈವ ಸ್ಥಳಗಳನ್ನೂ ವರ್ಣಿಸುವ ಲಲಿತಾಗಮಜ್ಞಾನಪಾದ ಶಿವಲಿಂಗಪ್ರಾದುರ್ಭಾವಪಟಲ ದಲ್ಲಿ "ಸುಬ್ರಹ್ಮಣ್ಯೇऽಹಿಪೇಶ್ವರ" ಎಂದು ಹೇಳಿದೆಯಾಗಿ ಶೈವವಿಧಿಯ ಲ್ಲಿದೆ. ಸುಬ್ರಹ್ಮಣ್ಯ ಸ್ಥಳದಲ್ಲಿ (ಅಹಿಪ = ವಾಸುಕಿಯು) ಸ್ಥಾಪಿಸಿದ ಈಶ್ವರಲಿಂಗವು ರಾಮೇಶ್ವರ. ಈ ವಿವರಣೆಯು ಸ್ಥಳಪುರಾಣಗಳಿಗೂ ಸಮ್ಮತವಾಗಿದೆ.

ಅಥವಾ ಕುಕ್ಕುಟಧ್ವಜನಾದ ಸ್ಕಂದಸ್ವಾಮಿಯು ನೆಲೆಸಿರುವ ಪಟ್ಟಣವಾದುದರಿಂದ ಕುಕ್ಕೆಪಟ್ಟಣವೆಂದೂ, ಕುಕ್ಕುಟಧ್ವಜನು ಸ್ಥಾಪಿಸಿದ ಲಿಂಗಗಳಾದುದರಿಂದ ಕುಕ್ಕೆ ಲಿಂಗಗಳೆಂದೂ, ಅರ್ಥವಾಗಿ ಈ ಸ್ಥಳಕ್ಕೆ ಕುಕ್ಕೆ ಪಟ್ಟಣವೆಂದೂ, ಕುಕ್ಕೆ ಲಿಂಗಗಳೆಂದೂ, ಹೆಸರುಂಟಾಗಿರಬಹುದು. ಕುಕ್ಕುಟ ಎಂದರೆ ಕೋಳಿ, ನವಿಲು ಧ್ವಜದಾಗಿ ಉಳ್ಳವನ ಪಟ್ಟಣ ಎಂಬ ಅರ್ಥಕ್ಕೆ ಮಧ್ಯಪದ ಲೋಪವಾಗಿದೆ—ಎಂದೂ ಮರ್ಕ = ಮರ್ಕಟ ಎಂಬಂತೆ ಕುಕ್ಕು = ಕುಕ್ಕುಟ ಶಬ್ದಗಳೂ ಸಮಾನಾರ್ಥಗಳೆಂದೂ, ತದ್ಭವವಾಗಿ ಕುಕ್ಕು ಶಬ್ದವು ಕುಕ್ಕೆ ಎಂದು ಮಾರ್ಪಟ್ಟಿದೆ ಎಂದೂ ತಿಳಿಯಬೇಕು. ಈ ಅರ್ಥವೂ ಪುರಾಣಸಮ್ಮತವಾದುದೇ. ಈ ಮೊದಲು ಕುಕ್ಕೆಲಿಂಗಗಳೆಂದರೆ ಕುಕ್ಕೆಯಲ್ಲಿ ಲಿಂಗಗಳನ್ನೂ ಮುಚ್ಚಿಟ್ಟು, ಪೂಜಿಸು ತ್ತಿದ್ದರು ಎಂದು ಮುಂತಾದ ಕಟ್ಟುಕಥೆಗಳು ಈ ಕುಕ್ಕೆಶಬ್ದದ ಮೂಲಾ ರ್ಥವು ಮರೆತುಹೋದ ಕಾಲದಲ್ಲಿ ಗ್ರಾಮ್ಯರು ಕರ್ಣರಂಜನೆಗಾಗಿ ಮಕ ಳಿಗೆ ಹೇಳುತ್ತಿದ್ದ ಕಥೆಗಳೆಂದು ವಿಮರ್ಶಕರು ತಿಳಿಯುವರು. ಕೇವಲ ಮನೋರಂಜನೆಗಾಗಿ ಸ್ಥಳದ ಹೆಸರುಗಳಿಗೆ ಹೊಂದಿಕೆಯಾಗುವಂತೆ ಕಥೆ ಕಟ್ಟುವ ಸಂಪ್ರದಾಯವು ಇಂದಿಗೂ ನಡೆಯುತ್ತಿದೆ.

ಪೂರ್ವಕಾಲದಲ್ಲಿ ಈ ಕುಕ್ಕೆ ಪಟ್ಟಣದಲ್ಲಿ ಒಂದು ಲಕ್ಷ ಮನೆಗಳಿದ್ದವೆಂದು ಹೇಳುತ್ತಾರೆ. ಈಗ ಇಂಥ ಕುಕ್ಕೆ ಪಟ್ಟಣವೆಂಬ ಹೆಸರು ಇಲ್ಲಿಯ ದೇವರ ಮೇಲಿನ ಕೆಲವು ಪದ್ಯಗಳಲ್ಲಿ ಮಾತ್ರ ಉಳಿದಿರುತ್ತದೆ. ಆದರೆ ಇಲ್ಲಿಗೆ ಕುಕ್ಕೇಗ್ರಾಮವೆಂಬ ಹೆಸರು ಕಳೆದ 1904ನೇ ಇಸವಿ ಸೆಟ್ಲ್‌ಮೆಂಟ್ ಕಾಲದವರೆಗೆ ಇತ್ತು ಈಗ ಈ ಹೆಸರನ್ನು ಕೂಡ ತೆಗೆದುಬಿಟ್ಟಿರುತ್ತಾರೆ. ಈ ಕುಕ್ಕೇಪಟ್ಟಣವು ಲಕ್ಷ ಮನೆಗಳುಳ್ಳದ್ದಾಗಿತ್ತೆಂಬುದು ಈಗ ಕೇಳುವವರಿಗೆ ನಿಜವಲ್ಲವಾಗಿ ತೋರುವುದಾದರೂ ಸುತ್ತುಮುತ್ತಲಿನ 5ಮೈಲು ವಿಸ್ತೀರ್ಣದ ಕಾಡು ಪ್ರದೇಶಗಳನ್ನು ಸಂಚರಿಸಿ ನೋಡಿದರೆ ಪ್ರತಿ ಕಡೆಗಳಲ್ಲಿ ಬಾವಿ, ಮನೆತಿಟ್ಟೆ, ಪಾಗಾರಗಳು ಕಂಡುಬರುವುದೇ ಇದಕ್ಕೆ ಬಲವಾದ ನಿದರ್ಶನವಾಗಿರುತ್ತದೆ.

ಕಾಲಗತಿಯಿಂದಲೋ ಎಂಬಂತೆ ಇಲ್ಲಿ ಇರುತ್ತಿದ್ದ ರಾಜಧಾನಿಯು ಲುಪ್ತವಾಗಿ ಜನಸಂಖ್ಯೆಯು ಕಡಿಮೆಯಾಗಿ ವ್ಯಾಪಾರ ಉದ್ಯೋಗಗಳು ಹೀನಸ್ಥಿತಿಗೆ ಬಂದದ್ದರಿಂದ ಊರಿನ ಸಂಪತ್ತು ನಷ್ಟವಾಗಿ ಹೋಗಿ. ಈಗ ಇರತಕ್ಕ ಎಲ್ಲಾ ಸಂಪತ್ತು ಅಭಿವೃದ್ಧಿಗಳು ಇಲ್ಲಿಯ ದೇವರನ್ನು ಯಾ ದೇವಸ್ಥಾನದ ಆಡಳ್ತೆಯನ್ನು ಅವಲಂಬಿಸಿಕೊಂಡಿರುತ್ತದೆ.

ನಾವು ಎಷ್ಟೇ ವಿವರವಾದ ಕ್ಷೇತ್ರದ ಪರಿಚಯ ಬರೆದರೂ ದೈವ ಭಕ್ತರು ಈ ಮಹಾ ಸಾನಿಧ್ಯಕ್ಕೆ ಸ್ವತಃ ದಯಮಾಡಿ ಅಲ್ಲಿನ ಮೂಲದೇವರಾದ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರನ ದರ್ಶನ ಭಾಗ್ಯಪಡೆದು ಅವನ ಅನುಗ್ರಹಕ್ಕೆ ಪಾತ್ರರಾಗಬಹುದು.

ಸುಬ್ರಹ್ಮಣ್ಯ (ದ. ಕ.)

ಆಡಳಿತಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಸುಬ್ರಹ್ಮಣ್ಯ

ಶ್ರೀ ಸುಬ್ರಹ್ಮಣ್ಯ ಸುಪ್ರಭಾತಂ

೧

ಕಲ್ಯಾಣಾನಾಂ ನಿಧಾನಾಯ ಶ್ರೀ ಕುಕ್ಕೇಪುರವಾಸಿನೇ ।
ಸುಬ್ರಹ್ಮಣ್ಯಾಯ ಮಹತೇ ಪರಸ್ಮೈಜ್ಯೋತಿಷೇನಮಃ ॥

೨

(ವಸಂತತಿಲಕಾ)

ಸ್ವಾಮಿನ್ನಶೇಷಭುವನಾಧಿಪತೇ ನಮಸ್ತೇ
ಭೂಮನ್ನಿಲಿಂಪಕುಲಮೌಲಿಮಣೇ ನಮಸ್ತೇ ।
ಧಾಮನ್ನುದಾರತಪಸಾಂ ಗತಯೇ ನಮಸ್ತೇ
ಕ್ಷೇಮಾಯ ಜಾಗೃಹಿ ನೃಣಾಂ ತವಸುಪ್ರಭಾತಂ ॥

೩

ಏತೇಽರುಣಾಮಲರುಚಃ ಕಿರಣಾ ದಿಗಂತೇ
ಸಂತನ್ವತೇಽರುಣಭುವೋ ಗಗನಂ ವಿತಾನಂ ।
ಮಾಣಿಕ್ಯರಂಜಿತಮಿವಾದ್ಯ ತವಾಲಯಸ್ಯ
ಶ್ರೀಮತ್ಕುಮಾರ ಭಗವನ್ ತವ ಸುಪ್ರಭಾತಂ ॥

೪

ದೇವ ತ್ವದೀಯವಚನಂ ಮಹತಾಮಲಂಘ್ಯಂ
ಸಂಪಾಲಯನ್ನುದಿತ ಏಷ ಸಹಸ್ರಭಾನುಃ ।
ಕಾರುಣ್ಯಪೂರ್ಣಲಲಿತೇಕ್ಷಣ ಪೂತಮೇನಂ
ಕರ್ತುಂ ಪ್ರಸೀದ ಭಗವನ್ ತವ ಸುಪ್ರಭಾತಂ ॥

೫

ತಾರಾಧಿಪಃ ಸಹಚರೀಸಹಿತಸ್ತ್ವದೀಯಾಂ
ಆಜ್ಞಾಂ ವಹನ್ನಮೃತಮಂಶುಭಿರೋಷಧೀನಾಂ ।
ರಾಜೀಷು ದೇವ ಪರಿಷಿಚ್ಯ ಗತೋಽಸ್ತಶೃಂಗಂ
ಸ್ವಾಮಿನ್ ಸಮಸ್ತಜಗತಾಂ ತವ ಸುಪ್ರಭಾತಂ ।

೬

ವಿಶ್ವೇಶ ತೇ ಭವನಮೇಷ ತಮೋವಿಹಂತಾ
ಭಾನುಃ ಕರೈಃ ಪರಿಮೃಜನ್ ಗಣಮುಪ್ಯುಡೂನಾಂ ।
ನಿರ್ಮಾಲ್ಯಮದ್ಯ ವಿನುದನ್ನುಪಸೇವತೇ ತ್ವಾಂ
ಶ್ರೀಮತ್ಕುಮಾರ ಜಯ ಸಂಪ್ರತಿ ಸುಪ್ರಭಾತಂ ॥

೭

ಗಾಯಂತಿ ಮಂಜುಲರವಾ ವಿಹಗಾಃ ಸಮೋದಂ
ಸೋಮಾಂಶುಸೌಮ್ಯಯಶಸೋ ಭವತೋಽವದಾನಂ ।
ಹೇರಂಬಸೋದರ ದಿಶೋ ವಿಶದಾ ನಿಕಾಮಂ
ಶ್ರೀಮತ್ಕುಮಾರ ಗಿರಿಜಾಸುತ ಸುಪ್ರಭಾತಂ ॥

೮

ಮಾತಾ ತವಾದ್ರಿತನಯಾ ವಿನಯಾನತಂ ತ್ವಾಂ
ಬಾಹೂಪಗೂಹಮಮರೇಂದ್ರವಿನೂತ ನೇತುಂ ।
ಉತ್ಸಂಗಮುತ್ಸುಕಮನಾ ಮನಸಾಮಗಮ್ಯಂ
ಶ್ರೀಮತ್ಕುಮಾರ ಗಿರಿಶಾತ್ಮಜ ಸುಪ್ರಭಾತಂ ॥

೯

ಯೋ ಮೃಗ್ಯಸೇ ಮುನಿಜನೈರ್ಗುಹ ಹೃದ್ಗುಹಾಯಾಂ
ಯೋ ರಾಜಸೇ ಮಹಿತ ವಾಙ್ಮನಸಾಭ್ಯತೀತಃ ।
ಸೋಽದ್ಯ ಸ್ಥಿತೋಽಸಿ ಪುರತಃ ಕರುಣಾಲಯಸ್ತ್ವಂ
ನೇತ್ರೋತ್ಸವಾಯ ಭಜತಾಂ ತವ ಸುಪ್ರಭಾತಂ ॥

೧೦

ಏತೇ ಹುತಾಶಭವ ತುಂಬುರುನಾರದಾದ್ಯಾಃ
ಗಾಂಧರ್ವಗಾನನಿಪುಣಾಃ ಸಹ ವೀಣಯಾ ತೇ ।
ಗಾತುಂ ಯಶೋಽಂಬರತಲಂ ತ್ವರಯಾ ಶ್ರಯಂತೇ
ಶ್ರೇಯೋನಿಧೇ ವರದ ತೇ ಭವತಾದ್ವಿಭಾತಂ ॥

೧೧

ಚಂಚದ್ಭುಜಪ್ರಹಿತಘೋರಶರಪ್ರಹಾರೈಃ
ಕ್ರೌಂಚಾದ್ರಿಭೇದನ ಮದಾಂಬುಸೃಜಾಂ ಗಜಾನಾಂ ।
ಪಂಚಾಸ್ಯ ತಾರಕಪುರೋಗಮದಾನವಾನಾಂ
ಪಂಚಾನನಾತ್ಮಜ ವಿಭೋ ಭವತು ಪ್ರಭಾತಂ ॥

೧೨

ವಾಯುರ್ವಿಶಾಖ ಸುಮಸೌರಭಸಾರವಾಹೀ
ಕೌಮಾರಧಾರಜಲಶೀಕರಶೈತ್ಯಶಾಲೀ ।
ವೃಕ್ಷಾಂತರೇಷು ಮೃದುಮರ್ಮರಶಬ್ದಕಾರೀ
ತ್ವಾಂ ಸೇವತೇ ಗಿರಿಶನಂದನ ಸುಪ್ರಭಾತಂ ॥

೧೩

ಸ್ನಾತ್ವಾ ಸರಸ್ಯುಷಸಿ ನಾಥಥ ಸಮಾಗತಾನಾಂ
ವೇದಾನ್ ಸಮಾಹಿತಧಿಯಾ ಪಠತಾಂ ಮುನೀನಾಂ ।
ವ್ರಾತೋ ಬಹಿಸ್ತ್ವದವಲೋಕನಕೌತುಕಾನಾಂ
ತಿಷ್ಠತ್ಯಮೋಘಮಹಿಮನ್ ತವ ಸುಪ್ರಭಾತಂ ॥

೧೪

ಏತೇ ಮೃದಂಗಪಣವಾನಕ ಶಂಖತಾಲಾಃ
ಸ್ಕಂದ ತ್ವದೀಯವಿಮಲೋಜ್ಜ್ವಲಕೀರ್ತಿಮಾಲಾಃ ।
ವಂದಿಸ್ತುತಿಪ್ರಚಿತಕರ್ಣಸುಖಾಃ ಪ್ರವೃತ್ತಾಃ
ಸುತ್ರಾಮವಂದಿತಪದಾಸ್ತು ತವ ಸುಪ್ರಭಾತಂ ॥

೧೫

ವೇದಸ್ತುತಾಮರಮುಖಾಖಿಲಲೋಕಗೀತ
ಪ್ರತ್ಯಕ್ಷ ದೈವತ ಸತಾಂ ಪ್ರಣತಾರ್ತಿನಾಶ ।
ಯೋಗೀಂದ್ರಸಂಯಮಿತಮಾನಸರಾಜಹಂಸ
ಶ್ರೀಮತ್ಕುಮಾರ ಜಯ ಜಾಗೃಹಿ ಸುಪ್ರಭಾತಂ ॥

೧೬

ಗೌರೀಶಲಾಲಿತವಪುರ್ವಸತಿಃ ಶುಭಾನಾಂ
ನಾಗೇಶಪೂಜಿತಪದಃ ಪದವೀ ಯತೀನಾಂ
ನಾಕೇಶಸಂಸ್ತುತಬಲೋಽಸಿ ಫಲಂ ಶ್ರುತೀನಾಂ
ರಾಕೇಶಮುಗ್ಧಮುಖ ತೇ ಭವತು ಪ್ರಭಾತಂ ॥

೧೭

ಶಕ್ತ್ಯಾನಿಗೃಹ್ಯ ಗುಹ ತಾರಕಮಿಂದ್ರಶತ್ರುಂ
ನೈತಂ ತಮೋ ರವಿರಿವಾಪ್ರಮಿತಪ್ರಭಾವಃ ।
ಹರ್ಷಾಶ್ರುಭಿಃ ಸಹ ಸುರೈರಭಿಷೇಚಿತಸ್ತ್ವಂ
ಶ್ರೀಕಾರ್ತಿಕೇಯ ವಿಜಯೀಭವ ಸುಪ್ರಭಾತಂ ॥

೧೮

ತ್ವತ್ತೇಜ ಆಕಲಯಿತುಂಕ ಇಹಕ್ಷಮೋತ್ರ
ಸ್ಕಂದ ತ್ವದಂಶಮಪಿ ವೋಢುಮಥೋಪಯಾತಾ ।
ಭಾಗೀರಥೀ ಭಗವತೀ ಕ್ಷುಭಿತಾ ಕೃಶಾನುಃ
ಭಗ್ನಶ್ಚ ಭರ್ಗತನಯಾಸ್ತು ತವ ಸುಪ್ರಭಾತಂ ॥

೧೯

ಧರ್ಮಸ್ಯ ರಕ್ಷಣಮಭೀಕ್ಷ್ಯ ಸುರೇಂದ್ರಹೇತೋಃ
ಆವಿರ್ಭವಃ ಶರವಣೇ ತವ ಬರ್ಹಿಕೇತೋ ।
ಕ್ಲೇಶಾಬ್ಧಿಮಗ್ನಜನನಿಸ್ತರಣೈಕಸೇತೋ
ಶ್ರೀಮತ್ಕುಮಾರ ಗುಹ ಜಾಗೃಹಿ ಸುಪ್ರಭಾತಂ ॥

೨೦

(ಮಾಲಿನೀ)

ಉಷಸಿ ಖಲು ಗೃಣಂತೋ ನಾಮ ತೇ ತಾರಕಾರೇ
ಶರವಣಭವ ರಮ್ಯೇ ಪುಣ್ಯತೀರ್ಥೇಽವಗಾಹ್ಯ ।
ಧೃತನವಜಲಕುಂಭಾ ದ್ವಾರಿ ತಿಷ್ಠಂತಿ ಭಕ್ತಾಃ
ತವ ಪರಿಚರಣಾರ್ಥಂ ವರ್ತತೇ ಸುಪ್ರಭಾತಂ ॥

೨೧

ಹಿಮಕಿರಣರುಚೀನಾಂ ಪುಲ್ಲಮಲ್ಲೀಸುಮಾನಾಂ
ಮರಕತಸಮಭಾಸಾಂ ಖಂಡಬಿಲ್ವೀದಲಾನಾಂ ।
ನಿಕರಮಿಹ ಗೃಹೀತ್ವಾ ವೃಂದಮಾಸ್ತೇ ಸುರಾಣಾಂ
ವರಿವಸಿತುಮಿದಾನೀಂ ಬಾಹುಲೇಯ ಪ್ರಭಾತಂ ॥

೨೨

ಕೃತಸುರನರಬಾಧಂ ಶೋಕದಂ ಸಜ್ಜನಾನಾಂ
ಯಮನಿಯಮರತಾನಾಮಂತಕಂ ತಾರಕಾಂ ತಂ ।
ನಿಟಿಲತಟವಿಸರ್ಪಿಭ್ರೂಲತಾಭೀಮಭಂಗಂ
ಹತವತ ಇದಮಸ್ತು ಸ್ಕಂದ ತೇ ಸುಪ್ರಭಾತಂ ॥

೨೩

ಶಿವಸುತ ಶಿವದಸ್ತ್ವಂ ಶೂರಪದ್ಮಾಂತಕಸ್ತ್ವಂ
ವರದ ವರಗುಣಸ್ತ್ವಂ ಶ್ರೇಯಸಾಮಾಕರಸ್ತ್ವಂ ।
ಸದಯನಯನ ಭಕ್ತಾನ್ ಪಶ್ಯ ವಶ್ಯಾನ್ ಸದಾಸ್ಮಾನ್ ।
ತಿಮಿರಮಿಹ ವಿಲೀನಂ ಸ್ವಸ್ತಿ ತೇ ಸುಪ್ರಭಾತಂ ॥

೨೪

ವಿವಿಧಕುಸುಮವರ್ಣಾನೇಷ ಬರ್ಹೀ ಕಲಾಪಾನ್
ನಯನಸುಭಗರೂಪಾನುತ್ಕಿರನ್ ಸಪ್ರಮೋದಂ ।
ಸುರುಚಿರಶಿತಿಕಂಠೋ ವೋಢುಮುತ್ಕಂಠತೇ ತ್ವಾಂ
ವಿಬುಧನಿವಹವಂದ್ಯಂ ದೇವ ತೇ ಸುಪ್ರಭಾತಂ ॥

೨೫

ಗರುಡಭಯವಿಲೀನಂ ವಾಸುಕಿಂ ಸರ್ಪರಾಜಂ
    ಭಜಕಸುರತರುಸ್ತ್ವಂ ಸಾನುಕಂಪಃ ಸಕಂಪಂ ।
ಅಭಯದ ಪರಿರಕ್ಷನ್ನಂಶತಃ ಸಂಪ್ರವಿಷ್ಟೋ
    ವಹಸಿ ಚ ತದಭೇದಂ ವಾಸುಕೇ ಸುಪ್ರಭಾತಂ ॥

೨೬

ಅಯಮುದಯತಿ ಭಾನುಸ್ತಪ್ತಚಾಮೀಕರಾಭೋ
    ಜಲರುಹರುಚಿಧಾರೀ ಹರ್ಷಕಾರೀ ದ್ವಿಜಾನಾಂ ।
ಅನುಹರತಿ ಕುಮಾರ ತ್ವತ್ಪದಂ ಭೃತ್ಯಸೇವ್ಯಂ
    ಪ್ರಮಥಪತಿಸುತಾದ್ಯೋತ್ತಿಷ್ಠತೇ ಸುಪ್ರಭಾತಂ ॥

೨೭

ರವಿಕರಪರಿರಂಭಾಜ್ಜಾತಹಾಸಾ ನಲಿನ್ಯಃ
    ತವ ವಿಜಯಕಥಾಯಾಃ ಸ್ಫೂರ್ತಿಮಂತಃ ಕವೀಂದ್ರಾಃ ।
ಶಿವತನಯ ಸಮಾಧೌ ಸಾದರಾಃ ಸಂಯಮೀಂದ್ರಾಃ
    ಭವತು ಭುವನಭಾಗ್ಯಾದ್ದೇವ ತೇ ಸುಪ್ರಭಾತಂ ॥

೨೮

(ಭುಜಂಗಪ್ರಯಾತಂ)

ನಮೋ ಲೋಕಧಾತ್ರೇ ನಮೋ ನಾಕಭರ್ತ್ರೇ
    ನಮೋ ವಿಶ್ವಕರ್ತ್ರೇ ನಮೋ ವಿಶ್ವಹರ್ತ್ರೇ ।
ನಮೋ ಯೋಗಿಹೃತ್ಫುಲ್ಲಪದ್ಮೇ ವಿಹರ್ತ್ರೇ
    ನಮೋ ದೇವಸೇನಾಪತೇ ಸುಪ್ರಭಾತಂ ॥

೨೯

(ಅನುಷ್ಟುಪ್)

ಬ್ರಹ್ಮರ್ಷಿಗಣವಂದ್ಯಾಯ ಬ್ರಹ್ಮವಿದ್ಯಾಪ್ರದಾಯಿನೇ ।
ಸುಬ್ರಹ್ಮಣ್ಯಾಯ ಶಾಂತಾಯ ಬ್ರಹ್ಮಚರ್ಯ
ಶ್ರಿಯೇ ನಮಃ ॥

೩೦

ವಾಸುಕಿಪ್ರತಿರೂಪಾಯ ಪ್ರಣತಾರ್ಥವಿಧಾಯಿನೇ ।
ದೇವಸೇನಾಸಮೇತ ಶ್ರೀ ಸುಬ್ರಹ್ಮಣ್ಯಾಯಮಂಗಲಂ ॥

೩೧

ವೇದವೇದಾಂತವೇದ್ಯಾಯ ಪ್ರಣವಾರ್ಥಸ್ವರೂಪಿಣೇ ।
ಶ್ರೀ ಕುಕ್ಕೇಪುರವಾಸ ಶ್ರೀ ಸುಬ್ರಹ್ಮಣ್ಯಾಯಮಂಗಲಂ ॥

೩೨

ವಿನಯಾನತಭಕ್ತಾಂತರಂಗನಾಥ ನಿವೇದಿತಾ ।
ಸುಬ್ರಹ್ಮಣ್ಯೇಶ್ವರಸ್ವಾಮಿನ್ನುತಿರೇಷಾಸ್ತು ತೇ ಮುದೇ ॥